# ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ನಿಯಮಿತ
# SRI GURU RAGHAVENDRA SAHAKARA BANK NIYAMITHA

# 15, Subbarama Chetty Road, Nettakallappa Circle, Basavanagudi, Bangalore - 560 004.
Phone : 26620380, 26620379 ■ Fax : 080-26506895 ■ E-mail : sgrsbn.bank@gmail.com
Website : www.raghavendrabank.com


**ಎಸ್.ಜಿ.ಆರ್/ಎಸ್.ಆರ್/ಹೆಚ್–106/2727/2022–23** **ದಿನಾಂಕ : 08–02–2023**

## ದಿನಾಂಕ 08–02–2023ರಂತೆ ಬ್ಯಾಂಕಿನ ಸ್ಥಿತಿಗತಿಗಳು

ಠೇವಣಿದಾರರ ಗಮನಕ್ಕೆ,

1) **2021–22ರ ಶಾಸನಬದ್ಧ ಲೆಕ್ಕ ಪರಿಶೋಧನೆ :** 2021–22ರ ಶಾಸನಬದ್ಧ ಲೆಕ್ಕಪರಿಶೋಧನೆಗೆ, 2020–21ರ ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆ ಪಡೆದ ಲೆಕ್ಕಪರಿಶೋಧನೆ ಸಂಸ್ಥೆಗಳು ಭಾರತೀಯ ರಿಸರ್ವ್ ಬ್ಯಾಂಕಿನ ನೂತನ ಮಾರ್ಗಸೂಚಿಯಂತೆ ಅರ್ಹವಿಲ್ಲದಿರುವುದರಿಂದ, ಮೆ॥ ವಿ.ಕೆ ನಿರಂಜನ್ & ಕೋ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ರವರನ್ನು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅನುಮತಿಯನ್ನು ಪಡೆದು ನೇಮಕ ಮಾಡಲಾಗಿ, ಕಾರ್ಯ ಆರಂಭಿಸಬೇಕಾಗಿರುತ್ತದೆ.

2) **ಮರು ಲೆಕ್ಕಪರಿಶೋಧನೆ :** 2014–15ರಿಂದ 2018–19ರ 5 ವರ್ಷಗಳ ಮರು ಲೆಕ್ಕ ಪರಿಶೋಧನಾ ಕಾರ್ಯವು ಮುಕ್ತಾಯಗೊಂಡಿದ್ದು, ಸದರಿ ಸಾಲುಗಳ ಲೆಕ್ಕಪತ್ರಗಳ ಪುನರ್ ಪರಿಶೀಲನೆಯ ನಂತರ ಮರು ಲೆಕ್ಕ ಪರಿಶೋಧನೆಯ ಪರಿಷ್ಕೃತ ವರದಿಯಂತೆ ರೂ.1294 ಕೋಟಿಗಳ ನಷ್ಟ ಹಾಗೂ ರೂ.811 ಕೋಟಿಗಳ ಅವಕಾಶವನ್ನು 2020–21ರ ಲೆಕ್ಕಪತ್ರಗಳಲ್ಲಿ ಅಳವಡಿಸಿ ಶಾಸನಬದ್ಧ ಲೆಕ್ಕಪರಿಶೋಧಕರು ದೃಢೀಕರಿಸಿರುತ್ತಾರೆ.

3) **2019–21ನೇ ಅವಧಿಯ ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆ (RBI Inspection)**: 2019–2021ನೇ ಸಾಲುಗಳ ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆಯು ದಿನಾಂಕ 05–09–2022ರಂದು ಪ್ರಾರಂಭಗೊಂಡು 16–09–2022ರಂದು ಮುಕ್ತಾಯಗೊಂಡಿದ್ದು ಪರಿವೀಕ್ಷಣೆಯ ವರದಿಯನ್ನು ಸಲ್ಲಿಸಿರುತ್ತಾರೆ, ಅನುಪಾಲನಾ ವರದಿಯನ್ನು ಸಲ್ಲಿಸುವ ಕಾರ್ಯ ಪ್ರಗತಿಯಲ್ಲಿದೆ.

4) **ಸಾಲಗಳ ವಸೂಲಾತಿ :** ಬ್ಯಾಂಕಿನಿಂದ ನೀಡಿರುವ ಸಾಲಗಳ ವಸೂಲಾತಿ ಕಾರ್ಯವು ಪ್ರಗತಿಯಲ್ಲಿದ್ದು, ದಿನಾಂಕ 10–01–2020ರಿಂದ (ಕಾಯ್ದೆ ಕಲಂ 35ಎ ವಿಧಿಸಿದ ದಿನಾಂಕ) ಈವರೆವಿಗೆ ಒಟ್ಟು ರೂ. 202.74 ಕೋಟಿ (ನಕಲಿ ಸಾಲಗಳ ಮುಕ್ತಾಯಗಳು ಸೇರಿದಂತೆ) ಸಾಲ ವಸೂಲಾತಿಯಾಗಿರುತ್ತದೆ. ಅಡಮಾನ ಸಾಲ ಹಾಗೂ ಮನೆಯ ಮೇಲಿನ ಭದ್ರತಾ ಸಾಲವನ್ನು ಪಡೆದು ಸುಸ್ತಿಯಾಗಿರುವ ಸಾಲಗಾರರಿಗೆ ಸಾಲವನ್ನು ಹಿಂದಿರುಗಿಸಲು ಸೂಚಿಸಿ ಸರ್ಫೇಸಿ ಕಾಯ್ದೆಯಡಿಯಲ್ಲಿ ನೋಟೀಸ್ ನೀಡಲಾಗಿ, ಹಿಂದಿರುಗಿದ ಪ್ರಕರಣಗಳಲ್ಲಿ ದಿನಪತ್ರಿಕೆಯಲ್ಲಿ ಜಾಹೀರಾತನ್ನು ಪ್ರಕಟಿಸಲು ಭಾರತೀಯ ರಿಸರ್ವ್ ಬ್ಯಾಂಕ್‌ನ ಅನುಮತಿಯನ್ನು ನಿರೀಕ್ಷಿಸುತ್ತಿದ್ದೇವೆ.

5) **ನಕಲಿ ಸಾಲಗಳು :** ಅಡಮಾನ ಸಾಲ, ಮೀರಳತೆ ಸಾಲ ಹಾಗೂ ಠೇವಣಿ ಮೇಲಿನ ಭದ್ರತಾ ಸಾಲಗಳ ಒಟ್ಟು ಮೊತ್ತ ರೂ 1371.39 ಕೋಟಿಗಳ ಪೈಕಿ ದಿನಾಂಕ 31–03–2021ರಂತೆ ರೂ.1,210/– ಕೋಟಿ (ರೂ.409.11 ಕೋಟಿ +

617.92 ಕೋಟಿ + 183.22 ಕೋಟಿ) ಗಳ ಮೊತ್ತದ ನಕಲಿ ಸಾಲ ಖಾತೆಗಳು ಕಂಡುಬಂದಿರುತ್ತದೆ ಹಾಗೂ ಇದರ ವಸೂಲಾತಿಗಾಗಿ ಸಿ.ಐ.ಡಿ ಮತ್ತು ಈ.ಡಿ ಸಂಸ್ಥೆಗೆ ತನಿಖಾ ವರದಿಯೊಂದಿಗೆ ದೂರು ಸಲ್ಲಿಸಲಾಗುತ್ತದೆ.

6) **ಬ್ಯಾಂಕಿನ ಸಿಬ್ಬಂದಿ :** ಬ್ಯಾಂಕಿನಲ್ಲಿ ನಡೆದ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದ ಕಾರಣ ವಜಾಗೊಂಡ 19 ಸಿಬ್ಬಂದಿಗಳ ಪೈಕಿ 12 ಸಿಬ್ಬಂದಿಗಳು ಸಹಕಾರ ಸಂಘಗಳ ನಿಬಂಧಕರ ಪ್ರಾಧಿಕಾರದ ಮುಂದೆ ಕಾಯ್ದೆ ಕಲಂ 70ರ ಅಡಿಯಲ್ಲಿ ಮೊಕದ್ದಮೆಯನ್ನು ದಾಖಲಿಸಿರುತ್ತಾರೆ. ಸಿ.ಐ.ಡಿ ಪತ್ರ ದಿನಾಂಕ 24–05–2022ರಲ್ಲಿ ತಿಳಿಸಿದ ಬಂಧನಕ್ಕೊಳಗಾದ ಬ್ಯಾಂಕಿನ 10 ಸಿಬ್ಬಂದಿಗಳನ್ನು ಸೇವಾ ನಿಯಮದಂತೆ ಬಂಧನಕ್ಕೊಳಗಾದ ದಿನದಿಂದ ಕರ್ತವ್ಯದಿಂದ ವಜಾಗೊಳಿಸಲಾಗಿದೆ. ವಿವರಗಳನ್ನು ಬ್ಯಾಂಕಿನ ಜಾಲತಾಣದಲ್ಲಿ ಪ್ರಕಟಿಸಲಾಗಿದೆ.

7) **ಡಿ.ಐ.ಸಿ.ಜಿ.ಸಿ :** ಡಿ.ಐ.ಸಿ.ಜಿ.ಸಿ ವಿಮಾ ಸಂಸ್ಥೆಯು ಬ್ಯಾಂಕಿನ ಅರ್ಹ ಠೇವಣಿದಾರರಿಗೆ ವಿಮಾ ಮೊತ್ತವನ್ನು ಪಾವತಿಸಿದ್ದು, ದಿನಾಂಕ 08–02–2023ರಂತೆ ವಿವರ ಈ ಕೆಳಕಂಡಂತಿರುತ್ತದೆ.

| ವಿವರ | ಸಂಖ್ಯೆ (No of claims) | ವಿಮಾ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 1) ದಿನಾಂಕ 08–02–2023ರವರೆಗೆ ಪಾವತಿಸಿದ ಮೊತ್ತ | 22,244 | 712.35 |
| 2) ಬಾಕಿ – ಬ್ಯಾಂಕ್ ಖಾತೆಯ ತಪ್ಪಾದ ಸಂಖ್ಯೆ, ಬಹು ನಾಮಿನಿ, ಡಿ.ಐ.ಸಿ.ಜಿ.ಸಿ ಸಂಸ್ಥೆಯಲ್ಲಿ ಲೆಕ್ಕಪರಿಶೋಧನೆಗೆ ಬಾಕಿ ಇರುವ ಪ್ರಕರಣಗಳು, ದಾಖಲೆಗಳ ಸಲ್ಲಿಕೆ, ನಕಲಿ ಸಾಲಗಳು | 192 | 5.30 |
| 3) ತಿರಸ್ಕರಿಸಲಾದ ಕ್ಲೈಮ್‌ಗಳು | 261 | 5.79 |
| **ಒಟ್ಟು ಕ್ಲೈಮ್** | **22,697** | **723.44** |

ನೂತನ ಕ್ಲೈಮ್‌ಗಳನ್ನು ಸ್ವೀಕರಿಸುವ ಕುರಿತು ಡಿ.ಐ.ಸಿ.ಜಿ.ಸಿ ಸಂಸ್ಥೆಗೆ ಪತ್ರಗಳನ್ನು ಮತ್ತು ಮಿಂಚಂಚೆಗಳನ್ನು ಕಳುಹಿಸಲಾಗಿದ್ದು, ಉತ್ತರವನ್ನು ನಿರೀಕ್ಷಿಸುತ್ತಿದ್ದೇವೆ. ಆದ್ದರಿಂದ ನೂತನವಾಗಿ ಡಿ.ಐ.ಸಿ.ಜಿ.ಸಿ ಕ್ಲೈಮ್‌ಗಳನ್ನು ಬ್ಯಾಂಕಿನಲ್ಲಿ ಸ್ವೀಕರಿಸಲಾಗುವುದಿಲ್ಲ.

8) **ಬ್ಯಾಂಕಿನ ಪುನಶ್ಚೇತನ :** ಬ್ಯಾಂಕಿನ ಪುನಶ್ಚೇತನಕ್ಕೆ ಹಲವಾರು ಹೂಡಿಕೆದಾರರು, ಆರ್ಥಿಕ / ಬಂಡವಾಳ ಸಲಹೆಗಾರರು, ಸಣ್ಣ ಹಣಕಾಸು ಬ್ಯಾಂಕ್‌ನ ಅರ್ಜಿದಾರರು, ಕಿರುಬಂಡವಾಳ ಸಂಸ್ಥೆಗಳನ್ನು ಸಂಪರ್ಕಿಸುವ ಪ್ರಯತ್ನ ನಡೆಯುತ್ತಿದ್ದು, ಉತ್ತಮ ಪ್ರತಿಕ್ರಿಯೆ ದೊರೆತಿರುತ್ತದೆ. ಬ್ಯಾಂಕಿನ ಪುನಶ್ಚೇತನಕ್ಕೆ ಆಸಕ್ತಿಯುಳ್ಳವರನ್ನು ಗುರುತಿಸಲು ಆಸಕ್ತಿಯ ಅಭಿವ್ಯಕ್ತಿ ಕೋರುವ ಸೂಚನೆ (Expression of Interest) ಯನ್ನು ಪ್ರಕಟಿಸಲು ಭಾರತೀಯ ರಿಸರ್ವ್ ಬ್ಯಾಂಕಿನ ಅನುಮತಿಯನ್ನು ನಿರೀಕ್ಷಿಸುತ್ತಿದ್ದೇವೆ.

ಬ್ಯಾಂಕಿನ ಪುನಶ್ಚೇತನಕ್ಕೆ ವಿವಿಧ ರೀತಿಯಲ್ಲಿ ಠೇವಣಿದಾರರ ಠೇವಣಿಯನ್ನು ಬಂಡವಾಳವಾಗಿ ಪರಿವರ್ತಿಸಲು ಯೋಜನೆಗಳನ್ನು, ಬ್ಯಾಂಕಿನ ಆರ್ಥಿಕ ಮತ್ತು ಇತರ ಕ್ಷಮತೆಯನ್ನು ಪೂರ್ಣಗೊಳಿಸಿ ನೀಡಿರುವ ಪ್ರಸ್ತಾವನೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆಗಾಗಿ ಸಲ್ಲಿಸಲಾಗಿದೆ. ಇನ್ನೆರೆಡು ಸಂಸ್ಥೆಗಳು ಬ್ಯಾಂಕಿನ ಪುನಶ್ಚೇತನದಲ್ಲಿ ಆಸಕ್ತಿಯನ್ನು ವ್ಯಕ್ತಿಪಡಿಸಿದ್ದು, ಪ್ರಸ್ತಾವನೆಯನ್ನು ನಿರೀಕ್ಷಿಸುತ್ತಿದ್ದೇವೆ.

9) **ಮಾನ್ಯ ಸಹಕಾರ ಸಚಿವರ ಸಭೆ :** ದಿನಾಂಕ 17-01-2023ರಂದು ಮಾನ್ಯ ಸಹಕಾರ ಸಚಿವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಬ್ಯಾಂಕಿನ ಸ್ಥಿತಿಗತಿಗಳ ಕುರಿತು ವಿಮರ್ಷಿಸಿದ್ದು, ಠೇವಣಿಯನ್ನು ಬಂಡವಾಳವಾಗಿ ಪರಿವರ್ತಿಸಿ ಬ್ಯಾಂಕಿನ ಪುನಶ್ಚೇತನಕ್ಕೆ ಯೋಜನೆಯನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆಗೆ ಸಲ್ಲಿಸುವಂತೆ ಸಲಹೆಯನ್ನು ಸೂಚಿಸಲಾಯಿತು. ಅದಕ್ಕೆ ಉತ್ತರಿಸಿದ ಆಡಳಿತಾಧಿಕಾರಿಗಳು, ಈಗಾಗಲೇ ಸದರಿ ಯೋಜನೆಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಪರಿವೀಕ್ಷಣೆಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು. ಮಾನ್ಯ ಸಹಕಾರ ಸಚಿರು ಸಿ.ಐ.ಡಿ ಸಂಸ್ಥೆಯಲ್ಲಿ ನಡೆಯುತ್ತಿರುವ ತನಿಖೆಯನ್ನು ಸಿ.ಬಿ.ಐ ಸಂಸ್ಥೆಗೆ ವಹಿಸುವ ಕುರಿತು ಸಲಹೆಯನ್ನ ಕೋರಿದ್ದು, ಅದಕ್ಕೆ ಸಮ್ಮತಿಯನ್ನು ಸೂಚಿಸಲಾಗಿದೆ. ಬ್ಯಾಂಕಿನ ಠೇವಣಿದಾರರ ಹಿತದೃಷ್ಟಿಯಲ್ಲಿ, ಭಾರತೀಯ ರಿಸರ್ವ್ ಬ್ಯಾಂಕಿಗೆ ಶೀಘ್ರವಾಗಿ ಕ್ರಮವನ್ನು ಕೈಗೊಳ್ಳಲು ಮಾನ್ಯ ಸಹಕಾರ ಸಚಿವರು ಸೂಚಿಸಿದರು.

10) ತನಿಖೆಯಲ್ಲಿ, ಬ್ಯಾಂಕಿನ ವಂಚನೆಯಲ್ಲಿ ಭಾಗಿಯಾದ ಹಿಂದಿನ ನಿರ್ದೇಶಕರು ಹಾಗೂ ಸಿಬ್ಬಂದಿ, ಸಾಲಗಾರರು, ಠೇವಣಿದಾರರು, ಶಾಸನಬದ್ದ ಹಾಗೂ ಸಮವರ್ಥಿ ಲೆಕ್ಕ ಪರಿಶೋಧಕರ ವಿರುದ್ದ ಸಲ್ಲಿಸಿರುವ ದೂರಿನ ವಿವರಗಳನ್ನು ಬ್ಯಾಂಕಿನ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಮುಂದೆ ತನಿಖೆಯ ನಂತರ ದೂರುಗಳ ವಿವರಗಳನ್ನು ಬ್ಯಾಂಕಿನ ಜಾಲತಾಣದಲ್ಲಿ ಪ್ರಕಟಿಸಲಾಗುವುದು.

ತಮ್ಮ ವಿಶ್ವಾಸಿ

(ಅಶೋಕನ್ ಆರ್)
**ಆಡಳಿತಾಧಿಕಾರಿಗಳು**